ಕರ್ನಾಟಕ ಸರ್ಕಾರ

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ.

ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ
ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್,
ತುಮಕಲಹಳ್ಳಿ ಗ್ರಾಮ, ಬಿ.ಬಿ.ರಸ್ತೆ
ಚಿಕ್ಕಬಳ್ಳಾಪುರ-562101.

CHIKKABALLAPURA URBAN DEVELOPMENT AUTHORITY.

ಸಿಟ್ರಸ್ ಸಿಟಿ ಮೇಡೋಸ್, 4ನೇ ಸೆಕ್ಟರ್, ತುಮಕಲಹಳ್ಳಿ ಗ್ರಾಮ, ಚಿಕ್ಕಬಳ್ಳಾಪುರ-562101.

Email ID:cuda.cbpur@gmail.com

ದೂರವಾಣಿ ಸಂಖ್ಯೆ:08156-274501.

ಸಂಖ್ಯೆ:ಚಿನಅಪ್ರಾ/ವಿನ್ಯಾಸ/49/2023-24 | 1047 ದಿನಾಂಕ: 15 MAR 2024

: ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ:

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕವರ್ನಹಳ್ಳಿ ಗ್ರಾಮದ ಸ.ನಂ.138/3 ರಲ್ಲಿ 0ಎಕರೆ-38ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:

1. ಅರ್ಜಿದಾರರ ಮನವಿ ದಿನಾಂಕ:20.10.2023.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:539758 ದಿನಾಂಕ:12.10.2023
3. ದಿನಾಂಕ:20.01.2024 ರಂದು ನಡೆದ ಪ್ರಾಧಿಕಾರದ 33ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ.16 ರ ನಿರ್ಣಯ.
4. ಅರ್ಜಿದಾರರು ಶುಲ್ಕ ಪಾವತಿಸಿರುವ ದಿನಾಂಕ:15.02.2024 ಪ್ರಾಧಿಕಾರದ ರಶೀದಿ ಸಂಖ್ಯೆ:733.
5. ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರ ದಿನಾಂಕ:07.02.2024.
6. ಪರಿತ್ಯಾಜನಾ ಪ್ರಮಾಣ ಪತ್ರದ ದಿನಾಂಕ:06.03.2024

****

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರ ಪತ್ರದಲ್ಲಿ ಶ್ರೀ ಮುನಿರಾಜು ಬಿನ್ ಮುನಿಲಕ್ಷ್ಮಯ್ಯ, ಇವರು ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಕವರ್ನಹಳ್ಳಿ ಗ್ರಾಮದ ಸ.ನಂ.138/3 ರಲ್ಲಿ 0ಎಕರೆ-38ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಪ್ರಶ್ನಿತ ಜಮೀನನ್ನು ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶಕ್ಕಾಗಿ ಭೂಪರಿವರ್ತಿಸಿ ಉಲ್ಲೇಖ(2) ರಲ್ಲಿ ಅಧಿಕೃತ ಜ್ಞಾಪನ ಪತ್ರ ಹೊರಡಿಸಿರುತ್ತಾರೆ.

ದಿನಾಂಕ:20.01.2024 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ (16) ರಲ್ಲಿ ಪ್ರಸ್ತಾವನೆ ಸಂಬಂಧ ನಿಗಧಿತ ಶುಲ್ಕಗಳನ್ನು ಪಾವತಿಸಿಕೊಂಡು ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಅರ್ಜಿದಾರರು ಉಲ್ಲೇಖ(4) ರಲ್ಲಿ ನಿಗಧಿತ ಶುಲ್ಕಗಳನ್ನು ಪ್ರಾಧಿಕಾರಕ್ಕೆ ದಿನಾಂಕ:15.02.2024 ರಂದು ಪಾವತಿಸಿರುತ್ತಾರೆ.

ಉಲ್ಲೇಖ(5) ರಲ್ಲಿ ಅರ್ಜಿದಾರರು ಸದರಿ ಜಮೀನಿನಲ್ಲಿ ಯಾವುದೇ ತಂಟೆ-ತಕರಾರು, ದೂರುಗಳು, ನ್ಯಾಯಲಯದಲ್ಲಿ ದಾವೆಗಳು, ಲೋಕಾಯುಕ್ತ ಪ್ರಕರಣಗಳು, ಡಿಕ್ರಿ ಇತರೆ ಯಾವುದೇ ಪ್ರಕರಣಗಳು ಇರುವುದಿಲ್ಲ ಪ್ರಮಾಣ ಪತ್ರವನ್ನು ದೃಢೀಕರಿಸಿ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

--2

ಉಲ್ಲೇಖ (6)ರಲ್ಲಿ ವಿನ್ಯಾಸದಲ್ಲಿನ ರಸ್ತೆ ಪ್ರದೇಶಗಳನ್ನು ಉಪನೋಂದಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಕಚೇರಿ 1ನೇ ಪುಸ್ತಕದ ದಸ್ತಾವೇಜುನ ಸಂಖ್ಯೆ:ಸಿಕೆಬಿ-1-07976-2023-24 ದಿನಾಂಕ:06.03.2024 ರಂದು ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಲಾಗಿರುತ್ತದೆ.

ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ಏಕನಿವೇಶನ ನಕ್ಷೆಯಲ್ಲಿನ ಭೂ-ಉಪಯೋಗ ವಿಶ್ಲೇಷಣೆ ಈ ಕೆಳಕಂಡತ್ತಿರುತ್ತದೆ.

ಕ್ರ.ಸಂ.	ಭೂ-ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಕಡ%
01.	Amusement Parks	3003.45	80.59
02.	ಉದ್ಯಾನವನ	388.26	10.42
03.	ವಾಹನ ನಿಲುಗಡೆ	188.94	05.07
04.	ರಸ್ತೆ ವಿಸ್ತರಣೆಗಾಗಿ	146.13	03.92
	ಒಟ್ಟು	**3726.78**	**100.00**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 17 ರಡಿ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ(32) ರಡಿಯಲ್ಲಿ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಪ್ರಸ್ತಾವಿತ ಜಮೀನಿಗೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸನಕ್ಷೆ ಅನುಮೋದಿಸಲಾಗಿದ್ದು, ಈ ನಿವೇಶನವನ್ನು ಉಪವಿಭಾಗ ಮಾಡುವುದಾಗಲಿ, ನಿವೇಶನ ಅಳತೆಯನ್ನು ಮಾರ್ಪಾಡು ಮಾಡುವುದಾಗಲಿ ಮಾಡಕೂಡದು. ಒಂದು ವೇಳೆ ನಿವೇಶನವನ್ನು ಉಪವಿಭಜಿಸಬೇಕಾಗಿದ್ದಲ್ಲಿ ವಲಯ ನಿಯಮಾವಳಿಯನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರಂತೆ ಪ್ರಾಧಿಕಾರದ ಪೂರ್ವಾನುಮತಿ ಪಡೆಯತಕ್ಕದ್ದು.
2. **ಪ್ರಸ್ತಾವಿತ ವಿನ್ಯಾಸದಲ್ಲಿ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳುವ ಮುನ್ನ ನಿಯಾನುಸಾರ ಅಗತ್ಯ ಶುಲ್ಕವನ್ನು ಪಾವತಿಸಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಆವಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಂದ ಖಾತೆ ದಾಖಲು ಮಾಡಿಸಿಕೊಳ್ಳತಕ್ಕದ್ದು.**
3. ವಿನ್ಯಾಸದಲ್ಲಿ ಕಟ್ಟಡ ನಿರ್ಮಾಣ ಪ್ರಾರಂಭಿಸುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15(1) ರಂತೆ ಕಡ್ಡಾಯವಾಗಿ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗೆ ತಾಂತ್ರಿಕ ಅಭಿಪ್ರಾಯ ಪಡೆಯತಕ್ಕದ್ದು.
4. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
5. ಈ ಪ್ರದೇಶದಲ್ಲಿ ಹಾಲಿ ಇರತಕ್ಕ ಗಿಡ ಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು.
6. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯ ಪ್ರಕರಣಗಳಿಗೆ/ಸಿವಿಲ್ ವ್ಯಾಜ್ಯಗಳಿಗೆ ಅರ್ಜಿದಾರರೇ ನೇರ ಜವಾಬ್ದಾರರಾಗಿರುತ್ತಾರೆ.
7. ಈ ಅನುಮೋದಿತ ವಿನ್ಯಾಸ ನಕ್ಷೆಯು ನಿಗಧಿಪಡಿಸಲಾದ ಮಾಪನ (ಸ್ಕೇಲ್)ದಲ್ಲಿ ವ್ಯತ್ಯಾಸ ಇರುವುದು ಕಂಡುಬಂದಲ್ಲಿ ಅದನ್ನು ಸೂಕ್ತವಾಗಿ ಸ್ಥಳದ ವಸ್ತು-ಸ್ಥಿತಿ ಹಾಗೂ ಅಳತೆ ಪರಿಮಾಣಕ್ಕೆ ಅನುಗುಣವಾಗಿ ಪರಿಷ್ಕೃತ ವಿನ್ಯಾಸನಕ್ಷೆ ಅನುಮೋದನೆ ಪಡೆದುಕೊಳ್ಳತಕ್ಕದ್ದು.

--3

8. ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಏಕನಿವೇಶನ ವಿನ್ಯಾಸದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
9. ಈ ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ತಮ್ಮಿಂದ ಸಲ್ಲಿಸಲಾಗಿರುವ ಭೂ-ಮಾಲೀಕತ್ವ ದಾಖಲೆಗಳು, ಸರ್ವೆ ನಕ್ಷೆ, ಮತ್ತು ಖರಾಬು ಜಾಗೆಗಳ ಬಗ್ಗೆ ಮಾಹಿತಿ/ದಾಖಲೆ ಮತ್ತು ಇತರೆ ದಾಖಲೆ ಅಥವಾ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಅಥವಾ ಪೋರ್ಜರಿಯಾಗಿದ್ದಲ್ಲಿ ವಿನ್ಯಾಸನಕ್ಷೆ ನೀಡಿರುವ ಅಂಗೀಕಾರ ತಾನೇತಾನಾಗಿ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ರಂತೆ ಕಾನೂನು ಕ್ರಮ ಜರುಗಿಸಲಾಗುವುದು ಹಾಗೂ ಒಟ್ಟಾರೆ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.
10. ವಿನ್ಯಾಸದಲ್ಲಿ ಕೊಳವೆ ಬಾವಿಗಳನ್ನು ತೆರೆಯುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು ಹಾಗೂ ತೆರೆದ ಕೊಳವೆ ಬಾವಿಯ ಬಗ್ಗೆ ಭೂಮಾಲೀಕರು ಹಾಗೂ ಸ್ಥಳೀಯ ಸಂಸ್ಥೆಗಳು ಸಂರಕ್ಷಣೆ ಮಾಡಲು ದಿನಾಂಕ:30.01.2012 ಮತ್ತು ದಿನಾಂಕ:06.08.2014 ರಂದು ಸರ್ಕಾರ ನೀಡಿರುವ ನಿರ್ದೇಶನಗಳಂತೆ ತಪ್ಪದೆ ಕ್ರಮವಹಿಸತಕ್ಕದ್ದು.
11. ವಿನ್ಯಾಸದಲ್ಲಿ ಲಘು ವಿದ್ಯುತ್ ವಾಹಕ ತಂತಿಗಳು ಹಾದು ಹೋಗಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಸೂಕ್ತ ಜಾಗಕ್ಕೆ ಅಥವಾ ರಸ್ತೆ ಬದಿಗೆ ಸ್ಥಳಾಂತರಿಸತಕ್ಕದ್ದು ಹಾಗೂ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಈ ಕಛೇರಿಗೆ ಸಲ್ಲಿಸತಕ್ಕದ್ದು.
12. ಮೇಲೆ ತಿಳಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸುವುದಾಗಲಿ ಹಾಗೂ ಕಾಲಕಾಲಕ್ಕೆ ವಿಧಿಸುವ ಇತರೆ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
13. ವಿನ್ಯಾಸ ಅನುಮೋದನೆಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ಮತ್ತು ಕಲಂ 73 ರಡಿಯಲ್ಲಿ ಕ್ರಮಕೈಗೊಳ್ಳಲಾಗುವುದು.


ಸಹಿ/-

ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.

ಯಥಾ ಪ್ರತಿಯನ್ನು:

1. ಶ್ರೀ ಮುನಿರಾಜು ಬಿನ್ ಮುನಿಲಕ್ಷ್ಮಯ್ಯ, ವಡ್ರಪಾಳ್ಯ, ಆವಲಗುರ್ಕಿ, ಚಿಕ್ಕಬಳ್ಳಾಪುರ-562101 ಇವರಿಗೆ ಮಾಹಿತಿಗಾಗಿ ನೀಡಲಾಗಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಆವಲಗುರ್ಕಿ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಇವರಿಗೆ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ Amusement Parks ಉದ್ದೇಶದ ವಸತಿಯೇತರ ಏಕನಿವೇಶನ ವಿನ್ಯಾಸ ನಕ್ಷೆಯನ್ನು ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ನೀಡಲಾಗಿದೆ.
3. ಉಪನೋಂದಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4. ~~ಕಛೇರಿ ಕಡತಕ್ಕೆ.~~

06/03/2024
ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ




ಕ್ರ.ಸಂ	ಸ.ನಂ	ಒಟ್ಟು ವಿಸ್ತೀರ್ಣ	ಖರಾಬು	ಉಳಿಕೆ ವಿಸ್ತೀರ್ಣ	ಭೂ.ಪ ವಿಸ್ತೀರ್ಣ	ಭೂ.ಪ ಆದೇಶ ಸಂಖ್ಯೆ
01	138/3	0–38	00	0–38	0–38	539758 ದಿನಾಂಕ:12/10/2023

ಸೂಚನೆ:–

1. ಅರ್ಜಿದಾರರು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ತಾಲ್ಲೂಕು ಇವರಿಂದ ಪಡೆದು ಸಲ್ಲಿಸಿರುವ ಸರ್ವೆ ನಕ್ಷೆಯ ಆಧಾರದ ಮೇಲೆ ವಿನ್ಯಾಸ ನಕ್ಷೆಯನ್ನು ತಯಾರಿಸಿದೆ. ಸರ್ವೆ ನಕ್ಷೆಯಲ್ಲಿನ ನ್ಯೂನ್ಯತೆಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
2. ಜಮೀನಿನ ಎಲ್ಲೆಯ ಬಗ್ಗೆ ಯಾವುದಾದರು ತಂಟೆ / ತಕರಾರುಗಳು, ನ್ಯಾಯಾಲಯದಲ್ಲಿ ಪ್ರಕರಣಗಳು ಇದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗಿದ್ದು, ಪ್ರಾಧಿಕಾರಕ್ಕೆ ಯಾವುದೇ ರೀತಿಯ ಜವಾಬ್ದಾರಿ ಇರುವುದಿಲ್ಲ.
3. ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಚಿಕ್ಕಬಳ್ಳಾಪುರ ತಾಲ್ಲೂಕು ಇವರು ದೃಢೀಕರಿಸಿ ನೀಡಿರುವ ಸರ್ವೆನಕ್ಷೆಯಂತೆ ಜಮೀನಿನ ವಿಸ್ತೀರ್ಣದಲ್ಲಿ ಸುಮಾರು 117.73 ಚ.ಮೀ ನಷ್ಟು ಕಡಿಮೆ ಇದ್ದು, ಸರ್ವೆನಕ್ಷೆಯಂತೆ 117.73 ಚ.ಮೀ ವಿಸ್ತೀರ್ಣವನ್ನು ಕಡಿಮೆ ಮಾಡಿ ವಿನ್ಯಾಸ ನಕ್ಷೆಯನ್ನು ಸಿದ್ದಪಡಿಸಿದೆ.
4. ಎಲ್ಲಾ ಅಳತೆಗಳು ಮೀಟರ್‌ನಲ್ಲಿ ಇರುತ್ತದೆ.

ಸ್ಥಳ ನಕ್ಷೆ (ಮಾಪನಕ್ಕಿಲ್ಲ)



ಒಟ್ಟು ವಿಸ್ತೀರ್ಣ	=	3844.51 ಚ.ಮೀ ಅಥವ 00ಎಕರೆ–38 ಗುಂಟೆ
ವಿರಾಬು ವಿಸ್ತೀರ್ಣ	=	0.00 ಚ.ಮೀ ಅಥವ 00ಗುಂಟೆ
ಅನ್ವಕ್ರಾಂತ ವಿಸ್ತೀರ್ಣ	=	3844.51 ಚ.ಮೀ ಅಥವ 00ಎಕರೆ–38 ಗುಂಟೆ
ಸರ್ವೆನಕ್ಷೆಯಂತೆ ವಿಸ್ತೀರ್ಣ	=	3726.78 ಚ.ಮೀ ಅಥವ 00ಎಕರೆ–37 ಗುಂಟೆ

ಭೂ–ಉಪಯೋಗ ವಿಶ್ಲೇಷಣೆ

ಕ್ರ.ಸಂ.	ಸೂಚಿ	ಭೂ–ಉಪಯೋಗ	ವಿಸ್ತೀರ್ಣ(ಚ.ಮೀ)	ಶೇಖಡ (%)
01		AMUSEMENT PARK	3003.45	80.59
02		ಉದ್ಯಾನವನ	388.26	10.42
03		ವಾಹನ ನಿಲುಗಡೆ	188.94	05.07
04		ರಸ್ತೆ	146.13	03.92
ಒಟ್ಟು			3726.78	100.00

ಈ ಪ್ರಾಧಿಕಾರದ ಪತ್ರ ಸಂಖ್ಯೆ:ಚಿನಅಪ್ರಾವಿನ್ಯಾಸ:49/23–24 ದಿನಾಂಕ:15.03.2024ರಲ್ಲಿ ನಮೂದಿಸಿದ ನಿಬಂಧನೆಗಳಿಗೆ ಒಳಪಟ್ಟು ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ **AMUSEMENT PARKS** ಉದ್ದೇಶದ ವಸತಿಯೇತರ ವಿನೋದಾವಳಿ ವಿನ್ಯಾಸ ನಕ್ಷೆಯನ್ನು ಅನುಮೋದಿಸಿದೆ

ಕರ್ನಾಟಕ ಸರ್ಕಾರ
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ.

06/03/2024
ನಗರ ಯೋಜಕ ಸದಸ್ಯರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

06/03/2024
ಆಯುಕ್ತರು
ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ,
ಚಿಕ್ಕಬಳ್ಳಾಪುರ

ನ.ಯೋ: ಮಂಜುನಾಥ ಆರ್.ಸಿ

ವಿಷಯ:		
	ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ಕವರನಹಳ್ಳಿ ಗ್ರಾಮದ ಸರ್ವೆ.ನಂ.138/3 ರಲ್ಲಿ 0ಎಕರೆ–38ಗುಂಟೆ ವಿಸ್ತೀರ್ಣದ ಭೂಪರಿವರ್ತಿತ ಪ್ರದೇಶಕ್ಕೆ ರಚಿಸಲಾದ ಕೃಷಿ ಭೂ ಉಪಯೋಗದಲ್ಲಿ ಅನುಮತಿಸಬಹುದಾದ AMUSEMENT PARKS ಉದ್ದೇಶದ ವಸತಿಯೇತರ ವಿನೋದಾವಳಿ ವಿನ್ಯಾಸ ನಕ್ಷೆ.	ಅಳತೆ:–1:600
	ಅರ್ಜಿದಾರರು: ಶ್ರೀ ಮುನಿರಾಜು ಬಿನ್ ಮುನಿಲಕ್ಷ್ಮಯ್ಯ	ನಕ್ಷೆ ಸಂಖ್ಯೆ: 49/2023–24